**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 30.07.2022.</u>**
**<u>ಪಾಟೀ ಸವಾಲುಃ 12, 15 ರಿಂದ 18 ನೇ ಪ್ರತಿವಾದಿ ಪರ ಶ್ರೀಮತಿ.ಎಂವಿಪಿ ವಕೀಲರಿಂದಃ</u>**

12. ನಾನು ಸರ್ವೆ ನಂ. 121/2 ರ ಪಹಣಿಯನ್ನು ನೋಡಿದ್ದೇನೆ. ಸರ್ವೆ ನಂ. 121/2 ರ ಜಮೀನಿನ ವಿಸ್ತೀರ್ಣ 9 ಎಕರೆ 27 ಗುಂಟೆ ಇದೆ. ಸರ್ವೆ ನಂ. 121/2 ರ ಪಹಣಿ ನನ್ನ ಅಜ್ಜನ ಹೆಸರಿನಲ್ಲಿ ಇದೆ. ನಾನು ಈದಾವೆ ಸಲಿಲಸುವಾಗ ಹಾಜರು ಪಡಿಸಿರುವ ಪಹಣಿ ದಾಖಲೆಯಲ್ಲಿ ನನ್ನ ಅಜ್ಜ ಥಾಕಲು ಜೈನು ಗುರವ ರವರ ಹೆಸರಿನಲ್ಲಿ ಇತ್ತು. ದಾವಾ ಸಲ್ಲಿಸುವಾಗ ಸರ್ವೆ ನಂ. 121/2 ರ ದಾಖಲೆಗಳಲ್ಲಿ ಮಲಪ್ರಭಾ ಶಿಂದೆ, ಪ್ರತಿಮಾ ಗವಸ, ಬಸವಂತ ರವಳುಚೆ, ಅಶ್ವಿನಿ ಯಳ್ಳೂರಕರ ರವರ ಹೆಸರು ಇದ್ದವು ಎಂದರೆ ಸರಿಯಲ್ಲ. ಪ್ರತಿವಾದಿ 15 ರಿಂದ 18 ರವರು ಈ ದಾವೆಯಲ್ಲಿ ಸಲ್ಲಿಸಿರುವ ತಕರಾರನ್ನು ಓದಿ ತಿಳಿದುಕೊಂಡಿದ್ದೇನೆ. ನಾನು ಪ್ರತಿವಾದಿ 15 ರಿಂದ 18 ರವರು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ನೋಡಿಲ್ಲ. ಸದರಿ 9 ಎಕರೆ 27 ಗುಂಟೆ ಜಮೀನಿನಲ್ಲಿ 4 ಎಕರೆ ಜಮೀನನ್ನು ಮಲಪ್ರಭಾ ಟೈಲ್ಸ ಖಾನಾಪೂರ ಪಾಲುದಾರಿಕೆ ಸಂಸ್ಥೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ 4 ಎಕರೆ ಖರೀದಿ ಆದ ನಂತರ ಸರ್ವೆ ನಂ. 121/2 ಈಗ 121/2 ಎ ಮತ್ತು 121/2 ಬಿ ಎಂದು ಎರಡು ನಂಬರಗಳು ಆಗಿವೆ ಎಂದರೆ ನಿಜ. ಪ್ರತಿವಾದಿ 15 ರಿಂದ 18 ರವರು ಮ್ಯುಟೇಶನ ದಾಖಲೆ ಹಾಜರು ಮಾಡಿದ್ದಾರೆ ಎಂದರೆ ನನಗೆ ಗೋತ್ತಿಲ್ಲ. 4 ಎಕರೆ ಜಮೀನು ಮಾರಾಟ ಆದ ನಂತರ 4 ಎಕರೆಗೆ ಸರ್ವೆ ನಂ. 121/2 ಬಿ ಎಂದು ಹಿಸ್ಸಾ ನಂಬರ ಕೊಡಲಾಗಿದೆ ಎಂದರೆ ಸಾಕ್ಷಿಯು ನಂಬರ ಕೊಡಲಾಗಿದೆ ಆದರೆ ಮಾರಾಟ ಆಗಿಲ್ಲ ಎಂದು ಹೇಳುತ್ತಾರೆ. 9 ಎಕರೆ 27 ಗುಂಟೆ ಜಮೀನಿನಲ್ಲಿ 4 ಎಕರೆ ಖರೀದಿ ಜಮೀನು ಬಟ್ಟು ಉಳಿಕೆ ಜಮೀನಿಗೆ ಸರ್ವೆ ನಂ. 121/2 ಎ ಎಂದು ಹಿಸ್ಸಾ ನಂಬರ ಕೊಡಲಾಗಿದೆ ಎಂದರೆ ಸರಿಯಲ್ಲ. ಸದರಿ 4 ಎಕರೆ ಜಮೀನು ಸರ್ವೆ ನಂ. 121/2 ಬಿ ಪುನಃ ರಿಹಿಸ್ಸಾ ನಂಬರ 121/2 ಎಂದು ಕೊಡಲಾಗಿದೆ ಎಂದರೆ ನನಗೆ ಗೋತ್ತಿಲ್ಲ. ಸರ್ವೆ ನಂ. 121/2 ಎ ಜಮೀನಿಗೆ ರಿಹಿಸ್ಸಾ ನಂಬರ 121/4, 121/5, 121/6, 121/7 ಮತ್ತು 121/8 ಎಂದು ನಂಬರ ಕೊಡಲಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ವ ಮಾಹಿತಿ ತೋರಿಸಲು ಪ್ರತಿವಾದಿ 15 ರಿಂದ 18 ರವರು

ಎಂಇ ನಂ.2889 ಹಾಜರು ಮಾಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ನಾನು ಸರ್ವೆ ನಂ. 121/2 ವಿ.9 ಎಕರೆ 27 ಗುಂಟೆಗೆ ಹಾಕಿದ್ದೇನೆ.

13. ಮಲಪ್ರಭಾ ಟೈಲ್ಸ ಪಾಲುಗಾಗಿಕೆ ಸಂಸ್ಥೆ 4 ಎಕರೆ ಜಮೀನಿನಲ್ಲಿ ಮಲಪ್ರಭಾ ಟೈಲ್ಸ ಖಾನಾಪೂರ ಫ್ಯಾಕ್ಟರಿ ಫ್ರಾರಂಭ ಮಾಡಿದ್ದಾರೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಅವರು ಬಾಡಿಗೆ ಕೊಡುತ್ತೇನೆ ಎಂದು ಫ್ರಾರಂಭ ಮಾಡುತ್ತೇನೆ ಎಂದು ಹೇಳುತ್ತಾರೆ. ಬಾಡಿಗೆ ಕರಾರು ಪತ್ರ ಆಗಿಲ್ಲ, ಸಾಕ್ಷಿಯು ನಮ್ಮ ತಾಯಿಗೆ ಹಾಗೂ ಸಹೋದರನಿಗೆ ಬಾಡಿಗೆ ಹಣ ಕೊಡುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ತಾಯಿಗೆ ಹಾಗೂ ಸಹೋದರನಿಗೆ ಬಾಡಿಗೆ ಹಣ ಕೊಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಲಪ್ರಭಾ ಟೈಲ್ಸ ಪಾಲುಗಾಗಿಕೆ ಸಂಸ್ಥೆ ಸ್ಟೇಟ ಬ್ಯಾಂಕ ಆಫ ಇಂಡಿಯಾ ಖಾನಾಪೂರ ಬ್ಯಾಂಕಿನಿಂದ 4 ಎಕರೆ ಜಮೀನ ಮೇಲೆ, ಕಾರ್ಖಾನೆ ಹಾಗೂ ಮಶೀನಗಳ ಮೇಲೆ ಸಾಲವನ್ನು ಪಡೆದಿದ್ದಾರೆ ಎಂದರೆ ನಿಜ, ಸಾಕ್ಷಿಯು ಕಾರ್ಖಾನೆ ಫ್ರಾರಂಭ ಮಾಡಲು ಸಾಲ ಪಡೆದಿದ್ದಾರೆ ಎಂದು ಹೇಳುತ್ತಾರೆ. ಸದರಿ ಸಾಲವನ್ನು ಬ್ಯಾಂಕಿಗೆ ಮರುಪಾವತಿ ಮಾಡಿರಲಿಲ್ಲ ಆದ್ದರಿಂದ ಬ್ಯಾಂಕಿನವರು ಪಾಲುಗಾರಿಕೆ ಸಂಸ್ಥೆ ಹಾಗೂ ಪಾಲುದಾರರ ವಿರುದ್ಧ ಅಸಲು ದಾವೆ ನಂ. 269/89 ಬೆಳಗಾವಿಯ 1 ನೇ ಸಿವಿಲ ಜಡ್ಜ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ನಿಜ. ಸಾಕ್ಷಿಯು ಸಾಲ ಮರುಪಾವತಿಗಾಗಿ ಮಾಡಿದ್ದರು ಜಮೀನಿನ ಕುರಿತು ಅಲ್ಲ ಎಂದು ಹೇಳುತ್ತಾರೆ. ಪಾಲುದಾರಿಕೆ ಸಂಸ್ಥೆ ಜಮೀನಿನ ಮೇಲೆ ಸಾಲ ಪಡೆದಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೇಂದರೆ ಸರಿಯಲ್ಲ. ಸದರಿ ದಾವೆ ಒಎಸ ನಂ. 269/89 ಡಿಕ್ರಿಯಾಗಿ ಪಾಲುದಾರಿಗೆ ಸಂಸ್ಥೆ ರೂ. 6,29,756/- ಮರುಪಾವತಿ ಮಾಡಬೇಕೆಂದು ತೀರ್ಪು ಆಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಪಾಲುಗಾರಿಕೆ ಸಂಸ್ಥೆ ನ್ಯಾಯಾಲಯ ತೀರ್ಪಿನ/ಆದೇಶದಂತೆ ಹಣ ಮರುಪಾವತಿ ಮಾಡಲಿಲ್ಲ ಆದ್ದರಿಂದ ಬ್ಯಾಂಕಿನವರು ಎಫಡಿಪಿ ನಂ. 4/94 ಸಲ್ಲಿಸಿದ್ದರು ಎಂದರೆ ನನಗೆ ಗೋತ್ತಿಲ್ಲ. ಸದರಿ ಎಫಡಿಪಿ ನಂ.4/94 ರಲ್ಲಿ ಪಾಲುದಾರಿಕೆ ಸಂಸ್ಥೆಯ ಅಡ ಇಟ್ಟ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಬ್ಯಾಂಕಿನವರ ಹಣ ಮರುಪಾವತಿ ಆಗಬೇಕೆಂದು ಆದೇಶ ಆಗಿತ್ತು ಎಂದರೆ ನನಗೆ ಮಾಹಿತಿ

ಇಲ್ಲ. ನಂತರ ಬ್ಯಾಂಕಿನವರು ಇಪಿ ನಂ. 255/96 ಸಲ್ಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಇಪಿ ನಂ. 255/96 ರಲ್ಲಿ ಮಲಪ್ರಭಾ ಟೈಲ್ಸ ಪಾಲುಗಾಗಿಕೆ ಸಂಸ್ಥೆ ಅಡ ಇಟ್ಟ 4 ಎಕರೆ ಜಮೀನು, ಕಾರ್ಖಾನೆ ಹಾಗೂ ಮಶೀನರಿಯನ್ನು ಹರಾಜು ಮಾಡಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಹರಾಜಿನಲ್ಲಿ ಪ್ರತಿವಾದಿ 15 ರಿಂದ 18 ರವರು ರೂ. 8,97,000/- ಗಳಿಗೆ ಮಲಪ್ರಭಾ ಟೈಲ್ಸ ಪಾಲುಗಾಗಿಕೆ ಸಂಸ್ಥೆ ಅಡ ಇಟ್ಟ 4 ಎಕರೆ ಜಮೀನು, ಕಾರ್ಖಾನೆ ಹಾಗೂ ಮಶೀನರಿಯನ್ನು ಖರೀದಿ ಮಾಡಿದ್ದರು ಎಂದರೆ ಮಾಹಿತಿ ಇಲ್ಲ. ಸದರಿ ನ್ಯಾಯಾಲಯವು ಪ್ರತಿವಾದಿ 15 ರಿಂದ 18 ರವರಿಗೆ ಸೇಲ ಸರ್ಟಿಫಿಕೇಟ ಸಹ ಕೊಟ್ಟಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಸೇಲ ಸರ್ಟಿಫಿಕೇಟ ಪ್ರತಿವಾದಿಗಳು ಹಾಜರು ಮಾಡಿದ್ದಾರೆ ಎಂದರೆ ನನಗೆ ಗೋತ್ತಿಲ್ಲ. ಪ್ರತಿವಾದಿ 15 ರಿಂದ 18 ರವರು ಸದರಿ ಹರಾಜಿನಲ್ಲಿ ಖರೀದಿಸಿದ ಆಸ್ತಿಗಳ ಕಬ್ಜೆಯನ್ನು ಪಡೆಯಲು ಮಿಸಲೇನಿಯಸ್ ನಂ. 2/98 ಸಲ್ಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಅರ್ಜಿ ವಿಚಾರಣೆಯಾಗಿ ಕೊರ್ಟ ಬೇಲಿಫನಿಂದ ದಿನಾಂಕ 03.02.1998 ರಂದು ಸದರಿ ಆಸ್ತಿಗಳ ಕಬ್ಜೆಯನ್ನು ಪ್ರತಿವಾದಿ 15 ರಿಂದ 18 ರವರು ಪಡೆದಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿ 15 ರಿಂದ 18 ರವರು ಕಬ್ಜೆಯನ್ನು ಪಡೆದ ನಂತರ ಸರ್ವೆ ನಂ.121/2 ವಿ.4 ಎಕರೆ ಜಮೀನನ್ನು ತಮ್ಮ ಹೆಸರಿಗೆ ದಾಖಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 15 ರಿಂದ 18 ರವರು ಪಡೆದ ಆದೇಶಗಳನ್ನು ಯಾರು ಪ್ರಶ್ನೀಸಿಲ್ಲ ಎಂದರೆ ಸಾಕ್ಷಿಯು ನಾನು ಈ ದಾವೆಯನ್ನು ಹೂಡಿದ್ದೇನೆ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ಮತ್ತು ಜೆಎಂಎಫ ಸಿ ನ್ಯಾಯಾಧೀಶರು**
**ಖಾನಾಪೂರ .**